# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 215 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.09.2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಹಾನಗರ ಪಾಲಿಕೆಯಲ್ಲಿ ಪ್ರೊಫೆಶನಲ್ ಟ್ಯಾಕ್ಸ್ ಮತ್ತು ಜಿ.ಎಸ್.ಟಿ ಇರುವ ತೆರಿಗೆ ಕಡಿತಗೊಂಡಿರುವ ಕಾರಣ ಟ್ರೇಡ್ ಲೈಸನ್ಸ್ ಶುಲ್ಕ ವಸೂಲಾತಿ ಮಾಡುವ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ, ಪರವಾನಗಿ ನೀಡಲು ಅನುಸರಿಸುತ್ತಿರುವ ಪ್ರಕ್ರಿಯೆಗಳೇನು ಹಾಗೂ ಮಾನದಂಡಗಳೇನು; (ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಹಾಗೂ ಸಮಗ್ರ ಮಾಹಿತಿಯನ್ನು ಒದಗಿಸುವುದು) | ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ 1976ರ ಕಲಂ 353ರಂತೆ ರಾಜ್ಯದ ಮಹಾನಗರ ಪಾಲಿಕೆಗಳು ಕಾಯ್ದೆಯ ಅನುಸೂಚಿ X ರಲ್ಲಿ ನಿಗಧಿಪಡಿಸಿರುವ ಉದ್ದಿಮೆಗಳು/ವ್ಯಾಪಾರ ವಹಿವಾಟುಗಳಿಗೆ ಶುಲ್ಕ ವಿಧಿಸಿ, ಗರಿಷ್ಠ 5 ವರ್ಷಗಳ ಅವಧಿಯವರೆಗೆ ಉದ್ದಿಮೆ ಪರವಾನಿಗೆಯನ್ನು ನೀಡಲು ಅವಕಾಶವಿರುತ್ತದೆ.<br>ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ 1976ರ ಕಲಂ 423 ರಂತೆ ಉದ್ದಿಮೆ ಪರವಾನಿಗೆ ಸಂಬಂಧಿತ ಉದ್ದೇಶಕ್ಕೆ ಉಪವಿಧಿಗಳನ್ನು ರಚಿಸಿಕೊಳ್ಳಲು ಮಹಾನಗರ ಪಾಲಿಕೆಗಳಿಗೆ ಅವಕಾಶವಿದ್ದು, ಕಾಯ್ದೆಯಲ್ಲಿನ ಅವಕಾಶದಂತೆ ಉದ್ದಿಮೆ ಪರವಾನಿಗೆಗಳಿಗೆ ಪಾಲಿಕೆ ವತಿಯಿಂದ ಶುಲ್ಕಗಳನ್ನು ನಿಗಧಿಪಡಿಸಿ ಪರವಾನಿಗೆ ನೀಡಲಾಗುತ್ತಿದೆ. |
| ಆ) | ಟ್ರೇಡ್ ಪರವಾನಗಿ ಶುಲ್ಕ ಇರುವ ಗೊಂದಲಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಕಳೆದ ವರ್ಷದಲ್ಲಿ ಜಿಲ್ಲಾವಾರು ಸಂಗ್ರಹವಾಗಿರುವ ಟ್ರೇಡ್ ಪರವಾನಗಿ ಶುಲ್ಕ ಎಷ್ಟು? (ಸಮಗ್ರವಾದ ಮಾಹಿತಿಯನ್ನು ಒದಗಿಸುವುದು) | ಇಲ್ಲ.<br>ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ 1976ರ ಕಲಂ 423 ರಂತೆ ಉದ್ದಿಮೆ ಪರವಾನಿಗೆ ಸಂಬಂಧಿತ ಉದ್ದೇಶಕ್ಕೆ ಉಪವಿಧಿಗಳನ್ನು ರಚಿಸಿಕೊಂಡು ಮಹಾನಗರ ಪಾಲಿಕೆಗಳಿಂದಲೇ ವ್ಯಾಪಾರ/ಉದ್ದಿಮೆಗಳಿಗೆ ಮಾನದಂಡಗಳನ್ನು ವಿಧಿಸಿ ಶುಲ್ಕವನ್ನು ನಿಗಧಿಪಡಿಸಿ ಪರವಾನಿಗೆ ನೀಡಲು ಅವಕಾಶವಿರುವುದರಿಂದ, ಅದರಂತೆ ಕ್ರಮವಹಿಸಲಾಗುತ್ತಿದೆ.<br>ಸರ್ಕಾರದ ಆದೇಶ ಸಂಖ್ಯೆ: ನಅಇ 465 ಎಂಎನ್‌ಯು 2018 ದಿ:06.08.2019ರನ್ವಯ ಪೌರಾಡಳಿತ ನಿರ್ದೇಶನಾಲಯದ ಕೆ.ಎಮ್.ಡಿ.ಎಸ್. ಸಂಸ್ಥೆಯಿಂದ ಅಭಿವೃದ್ಧಿಪಡಿಸಿರುವ "ವ್ಯಾಪಾರ್" ತಂತ್ರಾಂಶದಲ್ಲಿ ಉದ್ದಿಮೆದಾರರು ಸರಳವಾಗಿ ಹಾಗೂ ಪಾರದರ್ಶಕವಾಗಿ ಆನ್‌ಲೈನ್ ಮೂಲಕ ಗರಿಷ್ಠ 5 ವರ್ಷಗಳ ಅವಧಿಯವರೆಗೆ ಉದ್ದಿಮೆ ಪರವಾನಿಗೆ ಪಡೆಯಲು/ನವೀಕರಣಗೊಳಿಸಲು ಅವಕಾಶ ಕಲ್ಪಿಸಲಾಗಿದ್ದು, ಇದರಿಂದಾಗಿ ಉದ್ದಿಮೆ ಪರವಾನಿಗೆ ಪಡೆಯುವ ಕ್ರಮವನ್ನು ಸರಳೀಕರಿಸಿ, ಪಾರದರ್ಶಕತೆಯನ್ನು ತರಲಾಗಿದೆ.<br>ಉದ್ದಿಮೆ ಪರವಾನಿಗೆ ಶುಲ್ಕ ಸಂಬಂಧಿತ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |

ಸಂಖ್ಯೆ: ನಅಇ 158 ಎಂಎನ್‌ಇ 2022(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ಡಿ.ಎಸ್. ಅರುಣ್ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:215ಗೆ ಉತ್ತರಿಸುವ ಬಗ್ಗೆ

Vyapar Districtwise Collection Details for 2021-22 (01/04/2021 to 31/03/2022)

| Sl. No. | District | Collection Amount |
|---|---|---|
| 1 | Bagalkote | 4580708 |
| 2 | Belagavi | 14941303 |
| 3 | Bellari | 5440874 |
| 4 | Bengaluru Rural | 5144532 |
| 5 | Bengaluru Urban | 10437833 |
| 6 | Bidar | 1916300 |
| 7 | Chamarajanagara | 2343515 |
| 8 | Chickamagalur | 6348745 |
| 9 | Chikkaballapur | 3130771 |
| 10 | Chitradurga | 5135720 |
| 11 | Davanagere | 7666242 |
| 12 | Dhakshina Kannada | 14692584 |
| 13 | Dharwad | 16622489 |
| 14 | Gadag | 4153708 |
| 15 | Hassan | 6234200 |
| 16 | Haveri | 3519135 |
| 17 | Kalaburgi | 10850578 |
| 18 | Kodagu | 7136422 |
| 19 | Kolar | 3211276 |
| 20 | Koppal | 3440996 |
| 21 | Mandya | 6324484 |
| 22 | Mysuru | 13071676 |
| 23 | Raichuru | 3742683 |
| 24 | Ramanagara | 7754779 |
| 25 | Shivamogga | 7858060 |
| 26 | Tumkuru | 5794444 |
| 27 | Udupi | 13865046 |
| 28 | Uttara Kannada | 7462931 |
| 29 | Vijayanagara | 3094150 |
| 30 | Vijayapura | 6235546 |
| 31 | Yadgiri | 2226645 |
| | GRAND TOTAL | **214378375** |

ಜಂಟಿ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು